# ವಿದ್ಯಾರ್ಥಿಗಳಿಗೆ ಕಲೆಯ ಮೂಲಕ ಶಾಲೆಯ ನಂಟು

ರುಚಿ ಕೊತ್ನಾಳ

***

ಅನೇಕ ತಿಂಗಳು ಯಾತನೆಯಿಂದ ಕೂಡಿದ್ದ ಮತ್ತು ನಿಶ್ಚಲವಾಗಿದ್ದ ಬದುಕು ಕೊನೆಗೂ ಸಹಜ ಸ್ಥಿತಿಗೆ ಮರುಳುತ್ತಿದೆ. ಎಲ್ಲವನ್ನೂ ಸಹಜ ಸ್ಥಿತಿಗೆ ತರುವ ಪ್ರಯತ್ನದ ಅಂಗವಾಗಿ ಸರ್ಕಾರವು ಶಾಲೆಗಳನ್ನು ಪುನರಾರಂಭಿಸಲು ಎಲ್ಲಾ ತಯಾರಿ ನಡೆಸಿದೆ. ಆದರೂ, ಇದು ಶಾಲಾ ಆಡಳಿತಕ್ಕೆ, ಶಿಕ್ಷಕರಿಗೆ, ಪೋಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಸವಾಲಿನ ಸಂಗತಿಯೇ. ವಿಶೇಷವಾಗಿ ವಿದ್ಯಾರ್ಥಿಗಳಿಗೆ ಇಷ್ಟೊಂದು ಸುದೀರ್ಘವಾದ ಅಂತರದ ನಂತರ ಶಾಲಾ ವ್ಯವಸ್ಥೆಯನ್ನು ಸಲೀಸಾಗಿ ಮತ್ತು ಆತ್ಮವಿಶ್ವಾಸದಿಂದ ಸ್ವೀಕರಿಸುವುದು ಬಹಳ ಕಷ್ಟಕರ. ಹಾಗಾಗಿ, ವಿದ್ಯಾರ್ಥಿಗಳು ಶಾಲೆಗೆ ಪೂರ್ತಿ ಆತ್ಮವಿಶ್ವಾಸ ಮತ್ತು ಆಸಕ್ತಿಯಿಂದ ಮತ್ತೆ ಒಗ್ಗಿಕೊಳ್ಳುವಂತೆ ಮಾಡಲು ಸೂಕ್ತ ಕಾರ್ಯತಂತ್ರಗಳನ್ನು ಯೋಜಿಸಬೇಕಾದ್ದು ಅತ್ಯವಶ್ಯ.

ನನಗೆ ಅನಿಸುತ್ತದೆ, ವಿದ್ಯಾರ್ಥಿಗಳನ್ನು ಶಿಕ್ಷಣದ ಕಡೆಗೆ ಒಲಿಯುವಂತೆ ಮಾಡಲು ಕಲೆ ಅತ್ಯುತ್ತಮ ಸಾಧನ. ಕಲಾ ಶಿಕ್ಷಕಳಾಗಿ, ನಾನು ಒಂದು ಕಾರ್ಯಯೋಜನೆಯನ್ನು ರೂಪಿಸಿದ್ದೇನೆ. ಅನುಪಯುಕ್ತ ಮತ್ತು ನೈಸರ್ಗಿಕ ಸಾಮಗ್ರಿಗಳನ್ನು ಬಳಸಿ, ಗುಂಪು ಆಧರಿತ ಮತ್ತು ವಿಷಯಾಧಾರಿತ ಕಾರ್ಯತಂತ್ರವನ್ನು ರೂಪಿಸುವುದು ನನ್ನ ಆದ್ಯತೆಯಾಗಿದೆ..

**ಅನುಪಯುಕ್ತ ಮತ್ತು ನೈಸರ್ಗಿಕ ಸಾಮಗ್ರಿಗಳ ಬಳಕೆ**

ಲಾಕ್‌ಡೌನ್ ಅವಧಿಯಲ್ಲಿ ಹೆಚ್ಚಿನ ವಿದ್ಯಾರ್ಥಿಗಳಿಗೆ ಚಿತ್ರಕಲೆಯ ಸಾಮಗ್ರಿಗಳಾದ ಕಾಗದ, ಬಣ್ಣ ಮುಂತಾದುವು ಲಭ್ಯವಿರಲಿಲ್ಲ. ಆದ್ದರಿಂದ, ಅವರ ಮನೆ ಮತ್ತು ಸುತ್ತಮುತ್ತ ಸಿಗುವ ಅನುಪಯುಕ್ತ ಮತ್ತು ನೈಸರ್ಗಿಕ ಸಾಮಗ್ರಿಗಳನ್ನು ಬಳಸುವಂತೆ ಅವರನ್ನು ನಾನು ಪ್ರೋತ್ಸಾಹಿಸಿದೆ. ಈ ಎಲ್ಲಾ ತಿಂಗಳುಗಳಲ್ಲಿ ಅವುಗಳನ್ನು ಬಳಸಿ ಹಲವಾರು ಕಲಾಕೃತಿಗಳನ್ನು ರಚಿಸಿದ್ದಾರೆ. ಇದನ್ನೇ ಶಾಲೆಯಲ್ಲಿ ಬಳಸಿ ವಿದ್ಯಾರ್ಥಿಗಳಿಗೆ ತರಗತಿಗಳು ಸಲೀಸಾಗುವಂತೆ, ಆರಾಮವಾಗುವಂತೆ ಮಾಡಬಹುದು.

ಅನುಪಯುಕ್ತ ಮತ್ತು ನೈಸರ್ಗಿಕ ಸಾಮಗ್ರಿಗಳನ್ನು ಬಳಸುವುದರಿಂದ ಹಲವಾರು ಅನುಕೂಲಗಳಿವೆ. ಕೆಲವೊಮ್ಮೆ ವಿದ್ಯಾರ್ಥಿಗಳು, ವಿಶೇಷವಾಗಿ ಚಿತ್ರ ಬರೆಯುವುದರಲ್ಲಿ ಪ್ರಾವೀಣ್ಯ ಇಲ್ಲದಿರುವ ವಿದ್ಯಾರ್ಥಿಗಳು ಚಿತ್ರ ಬರೆಯುವಾಗ ಕಾಗದ, ಬಣ್ಣದ ಪೆನ್ನು, ಜಲವರ್ಣಗಳ ಬಗ್ಗೆ ಬೇಸರಿಸಿಕೊಳ್ಳುತ್ತಾರೆ ಆದರೆ ಅವರು ಅದನ್ನು ವ್ಯಕ್ತಪಡಿಸುವುದಿಲ್ಲ. ಅಂತಹ ಸನ್ನಿವೇಶದಲ್ಲಿ, ಅನುಪಯುಕ್ತ ಮತ್ತು ನೈಸರ್ಗಿಕ ಸಾಮಗ್ರಿಗಳ ಬಳಕೆಯಿಂದ ಅವರ ಆಸಕ್ತಿ ಮರುಕಳಿಸಬಹುದು. ಅವರ ಸೂಕ್ಷ್ಮ ಪ್ರಜ್ಞೆ ಜಾಗೃತಗೊಂಡು ತಮಾಷೆಯೊಂದಿಗೆ ಕಲಿಕೆಯಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಬಹುದು. ಅನುಪಯುಕ್ತ ವಸ್ತುಗಳನ್ನು ಬಳಸಲು ಯಾವುದೇ ನಿಗದಿತ ತಂತ್ರಗಾರಿಕೆ ಇಲ್ಲದೇ ಇರುವ ಕಾರಣ, ತಮ್ಮದೇ ಆದ ಅನೇಕ ಕ್ರಿಯಾಶೀಲತೆಯನ್ನು ಬಳಸಿಕೊಂಡು, ವಿನೂತನ ಆವಿಷ್ಕಾರಗಳನ್ನು ಅವರು ಮಾಡಬಹುದು. ಚಿತ್ರಕಲೆಗೆ ಅಗತ್ಯವಿರುವ ಎಲ್ಲಾ ಸಾಮಗ್ರಿಗಳನ್ನು ವಿದ್ಯಾರ್ಥಿಗಳಿಗೆ ಶಾಲೆಗಳು ನೀಡುತ್ತವಾದರೂ, ಮನೆಯಲ್ಲಿ ಆ ಎಲ್ಲಾ ಪರಿಕರಗಳನ್ನು ಖರೀದಿಸುವಷ್ಟು ಶಕ್ತಿ ಎಷ್ಟೋ ವಿದ್ಯಾರ್ಥಿಗಳ ಪೋಷಕರಿಗೆ ಇರುವುದಿಲ್ಲ. ಇದರಿಂದಾಗಿ, ಎಷ್ಟೋ ಮಕ್ಕಳು ತಮ್ಮ ಸಾಮರ್ಥ್ಯವನ್ನು ತೋರಿಸಲಿಕ್ಕಾಗುವುದಿಲ್ಲ. ಆದರೂ, ಅನುಪಯುಕ್ತ ಮತ್ತು ನೈಸರ್ಗಿಕ ಸಾಮಗ್ರಿಗಳು ಅವರ ಮನೆಗಳಲ್ಲಿ ಮತ್ತು ಸುತ್ತಮುತ್ತ ಯಥೇಚ್ಛವಾಗಿ ಲಭ್ಯವಿರುತ್ತವೆ. ಆದ್ದರಿಂದ, ವಿದ್ಯಾರ್ಥಿಗಳು ಹೆಚ್ಚಿನ ವೆಚ್ಚವಿಲ್ಲದೆ ತಮ್ಮ ಕಲಾ ಯಾನವನ್ನು ಮುಕ್ತವಾಗಿ ಮುಂದುವರಿಸಬಹುದು. ಎಲ್ಲಕ್ಕಿಂತ ಹೆಚ್ಚಾಗಿ, ಅನುಪಯುಕ್ತ ಮತ್ತು ನೈಸರ್ಗಿಕ ವಸ್ತುಗಳ ಬಳಕೆ ಎಳೆಯ ಮನಸ್ಸುಗಳಲ್ಲಿ ಮರುಬಳಕೆ ಮತ್ತು ಪ್ರಕೃತಿಯೆಡೆಗಿನ ಗೌರವವನ್ನು ಹೆಚ್ಚಿಸುತ್ತದೆ.

ಕೆಲವು ಸಲಹೆಗಳು

ಸಾಮಾನ್ಯವಾಗಿ ವಿದ್ಯಾರ್ಥಿಗಳು ಚಿತ್ರಕಲಾ ತರಗತಿಯಲ್ಲಿ ಭೂದೃಶ್ಯ (ಲ್ಯಾಂಡ್‌ಸ್ಕೇಪ್) ಮತ್ತು ಚಿತ್ರ ಸಂಯೋಜನೆಯನ್ನು ಬಿಡಿಸುತ್ತಾರೆ. ಇದೇ ಮಾದರಿಯ ಚಟುವಟಿಕೆಯನ್ನು ಅನುಪಯುಕ್ತ ಮತ್ತು ನೈಸರ್ಗಿಕ ವಸ್ತುಗಳನ್ನು ಬಳಸಿಯೂ ಮಾಡಬಹುದು. ವಿದ್ಯಾರ್ಥಿಗಳು ತಮ್ಮ ಸುತ್ತಮುತ್ತಲೂ ಹೋಗಿ ಬೇರೆ ಬೇರೆ ಬಗೆಯ ಕಲ್ಲು, ಕಡ್ಡಿ, ಎಲೆಗಳು, ಕಾರ್ಡ್‌ಬೋರ್ಡ್, ದಿನಪತ್ರಿಕೆ, ಹಗ್ಗದ ಹುರಿ ಇತ್ಯಾದಿ ತೆಗೆದುಕೊಂಡು ಬರಲು ಹೇಳಿ. ಅವುಗಳನ್ನೆಲ್ಲಾ ಅಂಟಿಸಿ ವಿದ್ಯಾರ್ಥಿಗಳು ಭೂದೃಶ್ಯವನ್ನಾದರೂ ರಚಿಸಬಹುದು ಇಲ್ಲವೇ ಯಾವುದಾದರೊಂದು ಮಾದರಿಯನ್ನಾದರೂ ರಚಿಸಬಹುದು.

ಕತೆ ಹೇಳುವ ಚಟುವಟಿಕೆಗಳಿಗೆ, ವಿದ್ಯಾರ್ಥಿಗಳು ಹಳೆಯ ಸಾಕ್ಸ್, ಬಟ್ಟೆ, ದಿನಪತ್ರಿಕೆ ಮತ್ತು ಕಡ್ಡಿಗಳನ್ನು ಬಳಸಿ ಗೊಂಬೆಗಳು ಮತ್ತು ಮುಖವಾಡಗಳನ್ನು ಸಿದ್ಧಪಡಿಸಬಹುದು.

**ಗುಂಪು ಚಟುವಟಿಕೆಗಳು**

ಮಕ್ಕಳ ಮಾನಸಿಕ ಮತ್ತು ಭಾವನಾತ್ಮಕ ಬೆಳವಣಿಗೆಗೆ ಗುಂಪು ಚಟುವಟಿಕೆಗಳು ಅತ್ಯವಶ್ಯ. ಕೆಲವು ಮಕ್ಕಳು ಗುಂಪು ಚಟುವಟಿಕೆ ವೇಳೆ ಉತ್ತಮವಾಗಿ ಕಾರ್ಯನಿರ್ವಹಿಸುವುದು ಕಂಡುಬಂದಿದೆ. ಆದರೆ ಲಾಕ್‌ಡೌನ್ ವೇಳೆ ಮಕ್ಕಳು ಒಂಟಿಯಾಗಿಯೇ ಕೆಲಸ ಮಾಡುತ್ತಿದ್ದುದರಿಂದ, ಅವರ ಕಲಿಕಾ ಸಾಮರ್ಥ್ಯದ ಮೇಲೆ ಪರಿಣಾಮ ಬೀರಿರುವುದಿಲ್ಲ. ಅಲ್ಲದೆ, ಇದು ಹಲವಾರು ಮಾನಸಿಕ ಸಮಸ್ಯೆಗಳಿಗೂ ಕಾರಣವಾಗಿದೆ. ಮಕ್ಕಳು ಆನ್‌ಲೈನ್ ತರಗತಿಗಳನ್ನು ತಪ್ಪಿಸಲು ಯತ್ನಿಸುವುದು, ಅವರ ಕೆಲಸಗಳಲ್ಲಿ ಆಸಕ್ತಿ ವಹಿಸದೇ ಇರುವುದು ಅಥವಾ ತಮ್ಮ ಭಾವನೆ ಮತ್ತು ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಹಿಂದೇಟು ಹಾಕುವುದನ್ನು ನಾನು ಗಮನಿಸಿದ್ದೇನೆ. ಮಕ್ಕಳು ಶಾಲೆಗೆ ವಾಪಸಾದಾಗ ಇಂತಹ ಸಮಸ್ಯೆಗಳನ್ನು ನಿವಾರಿಸುವುದು ಅತ್ಯವಶ್ಯ. ಇದಕ್ಕಾಗಿ, ನಾನು ಗುಂಪು ಆಧರಿತ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಚಿಂತಿಸಿದ್ದೇನೆ. ಇದರಿಂದ ಮಕ್ಕಳು ಪರಸ್ಪರ ಮುಕ್ತವಾಗಿ ಮಾತನಾಡಲು, ಸಹಪಾಠಿಗಳೊಂದಿಗೆ ಬಾಂಧವ್ಯ ಬೆಳೆಸಿಕೊಳ್ಳಲು ಮತ್ತು ಆತ್ಮವಿಶ್ವಾಸ ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ. ಜೊತೆಗೆ, ಅದು ಕಲಿಕೆಯ ಪ್ರಕ್ರಿಯೆಯನ್ನು ಹೆಚ್ಚು ಖುಷಿಗೊಳಿಸುತ್ತದೆ.

**ಕೆಲವು ಸಲಹೆಗಳು**

ವಿದ್ಯಾರ್ಥಿಗಳು ಅನುಪಯುಕ್ತ ಮತ್ತು ನೈಸರ್ಗಿಕ ವಸ್ತುಗಳ ನೆರವಿನೊಂದಿಗೆ ಶಾಲೆಯ ಕೈತೋಟವನ್ನು ಅಲಂಕರಿಸಬಹುದು. ಇದಕ್ಕಾಗಿ, ಶಿಕ್ಷಕರು ವಿದ್ಯಾರ್ಥಿಗಳನ್ನು ಗುಂಪುಗಳಾಗಿ ವಿಭಾಗಿಸಿ, ಅವರಿಗೆ ಒಂದೊಂದು ಭಾಗವನ್ನು ನಿಯೋಜಿಸಿ, ಆ ಭಾಗವನ್ನು ಹಕ್ಕಿಗಳು, ಕೀಟಗಳು, ಹೂವುಗಳು ಇತ್ಯಾದಿ ಥೀಮ್‌ನಿಂದ ಅಲಂಕರಿಸುವಂತೆ ಹೇಳಬಹುದು. ಎಲ್ಲಾ ಗುಂಪುಗಳ ಸದಸ್ಯರು ಯೋಜನೆ ಸಿದ್ಧಪಡಿಸಲು, ಸಾಮಗ್ರಿಗಳನ್ನು ಸಂಗ್ರಹಿಸಿ, ಅಲಂಕರಿಸಿ, ದಾಖಲಾತಿ ಮತ್ತು ಪ್ರಸ್ತುತಪಡಿಸಲು ಭಾಗಿಯಾಗಬೇಕು. ಟಾಸ್ಕ್ ಮುಗಿಸಿದ ಬಳಿಕ ಪ್ರತಿ ತಂಡವೂ ತಮ್ಮ ತಂಡದ ಮತ್ತು ಇತರ ತಂಡಗಳ ಟಾಸ್ಕ್‌ಗಳನ್ನು ಪರಿಶೀಲಿಸಬೇಕು. ಅದೇ ರೀತಿ, ಕತೆ ಹೇಳುವ ಕುರಿತು ಗುಂಪು ಆಧಾರಿತ

ಚಟುವಟಿಕೆಗಳನ್ನೂ ನಾವು ಕೈಗೊಳ್ಳಬಹುದು. ಇಲ್ಲಿ, ಪ್ರತಿಯೊಂದು ಗುಂಪೂ ಕತೆ ಪುಸ್ತಕ ಬರೆಯುವ, ಪ್ರತಿಕೃತಿ ಮತ್ತು ಗೊಂಬೆಗಳನ್ನು ತಯಾರಿಸುವಂತಹ ಚಟುವಟಿಕೆಗಳನ್ನು ಮಾಡಿ ಪ್ರಸ್ತುತಪಡಿಸಬಹುದು.

**ಇತರ ವಿಷಯಗಳೊಂದಿಗೆ ಕಲೆಯ ಸಂಯೋಜನೆ**

ಕಲಿಕೆಯ ಪ್ರಕ್ರಿಯೆಯಲ್ಲಿ ಶಾಲೆಯ ವಾತಾವರಣ ಪ್ರಮುಖ ಪಾತ್ರ ವಹಿಸುತ್ತದೆ ಎಂಬುದನ್ನು ನಾವೆಲ್ಲರೂ ಬಲ್ಲೆವು. ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾದ ವಾತಾವರಣವನ್ನು ಶಾಲೆಗಳು ನಿರ್ಮಾಣ ಮಾಡಬೇಕಾಗುತ್ತದೆ. ಆದರೂ, ಹಲವಾರು ತಿಂಗಳುಗಳಿಂದ ಮಕ್ಕಳು ತಮ್ಮ ಮನೆಗಷ್ಟೇ ಸೀಮಿತವಾಗಿದ್ದರು ಹಾಗೂ ಶಾಲೆಯ ವಾತಾವರಣಕ್ಕೆ ಮತ್ತೆ ಹೊಂದಿಕೊಳ್ಳಬೇಕಾದರೆ ಕಷ್ಟವಾಗುತ್ತದೆ. ಇದರಿಂದ, ಕಲಿಕೆಯ ಮೇಲೆ ನಿರಾಸಕ್ತಿ ವಹಿಸಬಹುದು. ಅಷ್ಟೇ ಅಲ್ಲದೆ, ಅವರ ಕಲಿಕೆಯ ಮೇಲೆ ಕೂಡಾ ಇದು ಪರಿಣಾಮ ಬೀರಬಹುದು. ಹಾಗಾಗಿ ಕಲಿಕೆಯನ್ನು ಆಸಕ್ತಿದಾಯಕ ಮತ್ತು ಖುಷಿಯ ಸಂಗತಿಯನ್ನಾಗಿಸಬೇಕು. ಇದನ್ನು ಸಾಧಿಸಬೇಕಾದರೆ, ಕಲೆಯನ್ನು ಇತರ ವಿಷಯಗಳೊಂದಿಗೆ ಅಂದರೆ, ಸಮಾಜವಿಜ್ಞಾನ, ಗಣಿತ, ಭಾಷಾ ಕಲಿಕೆ ಮುಂತಾದ ವಿಷಯಗಳೊಂದಿಗೆ ಸಂಯೋಜಿಸುವುದು ಪರಿಣಾಮಕಾರಿ ಕಾರ್ಯತಂತ್ರವಾಗುತ್ತದೆ.

ಕೆಲವು ಸಲಹೆಗಳು

ಉದಾಹರಣೆಗೆ, ಗಣಿತದಲ್ಲಿ 'ದೊಡ್ಡದು ಮತ್ತು ಸಣ್ಣದು' ಎಂಬ ಪರಿಕಲ್ಪನೆಯನ್ನು ಕಲಿಸಲು ವಿದ್ಯಾರ್ಥಿಗಳಿಗೆ ಆನೆ, ಸಿಂಹ, ನಾಯಿ ಮತ್ತು ಇಲಿಯ ಚಿತ್ರಗಳನ್ನು ಬರೆಯುವಂತೆ ಹೇಳಬಹುದು. ಹಾಗೆಯೇ, ಇಂಗ್ಲಿಷ್ ಹಾಗೂ ಅವರ ಪ್ರಥಮ ಭಾಷೆಯ ಪದ್ಯಗಳಿಗೆ ಮತ್ತು ಕತೆಗಳಿಗೆ ಸಂಬಂಧಿಸಿದಂತೆ ಕಥಾಫಲಕಗಳನ್ನು ಮತ್ತು ಮಾದರಿಗಳನ್ನು ಸಿದ್ಧಪಡಿಸಲು ಹೇಳಬಹುದು. ಅದರಂತೆಯೇ, ಸಮಾಜವಿಜ್ಞಾನ ಪಾಠದಲ್ಲಿ ಇತಿಹಾಸಪೂರ್ವ ಕಾಲದ ಬಗ್ಗೆ ತಿಳಿವಳಿಕೆ ನೀಡುವ ಸಲುವಾಗಿ, ಆಯುಧಗಳು ಮತ್ತು ಸಾಧನಗಳನ್ನು ಮರ ಮತ್ತು ಕಲ್ಲುಗಳಿಂದ ತಯಾರಿಸುವಂತೆ ತಿಳಿಸಬಹುದು. ಅವುಗಳಿಗೆ ಹಚ್ಚುವ ಬಣ್ಣಗಳನ್ನು ಹೂವು, ಹಣ್ಣು, ಸುಣ್ಣದಕಲ್ಲು ಮುಂತಾದ ನೈಸರ್ಗಿಕ ವಸ್ತುಗಳಿಂದ ಪಡೆಯುವಂತೆ ಹೇಳಬಹುದು. ಇವೆಲ್ಲಕ್ಕಿಂತ ಹೆಚ್ಚಾಗಿ, ಮಕ್ಕಳು ಮರದ ತೊಗಟೆ, ಬಟ್ಟೆ ಅಥವಾ

ಮಣ್ಣಿನಲ್ಲಿ ಚಿತ್ರಲಿಪಿಗಳನ್ನು ಬಿಡಿಸುವಂತೆಯೂ ಹೇಳಬಹುದು!

**(ಚಿತ್ರಗಳಿವೆ: ಚಿತ್ರದ ವಿವರ: ಮಾಟ್ಲಿಯ ಎಪಿಎಸ್ ಶಾಲೆಯ ವಿದ್ಯಾರ್ಥಿಗಳು ಅನುಪಯುಕ್ತ ಮತ್ತು ನೈಸರ್ಗಿಕ ವಸ್ತುಗಳಿಂದ ಸಿದ್ಧಪಡಿಸಿದ ಕಲಾಕೃತಿಗಳು)**

**ಪಾಠ ಯೋಜನೆಯ ಮಾದರಿ : 1 ನೆ ತರಗತಿ**

**ವಿಷಯ:** ದೃಶ್ಯ ಕಲೆ (ಹಿಂದಿಯೊಂದಿಗೆ ಸಂಯೋಜನೆ)

**ಪಾಠ:** ನಾಲ್ಕನೇ ಪಾಠ: पे ही प (ಪತ್ತೇ ಹೀ ಪತ್ತೇ)

**ಉದ್ದೇಶಗಳು**

1. ಕಲಿಕೆಯ ಪ್ರಕ್ರಿಯೆಯನ್ನು ಖುಷಿಯಾಗಿ ಮತ್ತು ಆಸಕ್ತಿದಾಯಕವಾಗಿಸುವುದು
2. ವಿದ್ಯಾರ್ಥಿಗಳು ತಮ್ಮ ಕ್ರಿಯಾಶೀಲತೆ, ನವೀನ ಮತ್ತು ಕಲ್ಪನಾತ್ಮಕ ಸಾಮರ್ಥ್ಯವನ್ನು ಮುಕ್ತವಾಗಿ ಪ್ರದರ್ಶಿಸಲು ಅವಕಾಶ ನೀಡುವುದು
3. ಅನುಪಯುಕ್ತ ಮತ್ತು ನೈಸರ್ಗಿಕ ವಸ್ತುಗಳಿಂದ ಕಲೆಯನ್ನು ಸೃಷ್ಟಿಸಲು ಉತ್ತೇಜನ ನೀಡುವುದು.
4. ಗುಂಪಾಗಿ ಕೆಲಸ ಮಾಡುವುದು, ಹೊಸದನ್ನು ಕಂಡುಕೊಳ್ಳುವುದು, ಯೋಜನೆ ಸಿದ್ಧಪಡಿಸುವುದು, ಉಪಾಯಗಳ/ಚಿಂತನೆಗಳ ವಿನಿಮಯ ಮಾಡಿಕೊಳ್ಳುವುದು ಮತ್ತು ಪ್ರಸ್ತುತಪಡಿಸುವ ಗುಣವನ್ನು ಬೆಳೆಸಿಕೊಳ್ಳುವುದು.

**ಸಂಪನ್ಮೂಲಗಳು**

1. ಎನ್‌ಸಿಇಆರ್‌ಟಿ ಒಂದನೇ ತರಗತಿಯ ಹಿಂದಿ ಪಠ್ಯಪುಸ್ತಕ (ರಿಮ್‌ಝಿಮ್)
2. ಅಂತರ್ಜಾಲದಿಂದ ಪ್ರಾತಿನಿಧಿಕ ಫೋಟೊಗಳು ಮತ್ತು ಚಿತ್ರಗಳು
3. ಯು-ಟ್ಯೂಬ್‌ನಿಂದ ಪ್ರಾತಿನಿಧಿಕ ವಿಡಿಯೊಗಳು

**ಬೋಧನಾ ಮಾರ್ಗಗಳು:**

1. ಚಟುವಟಿಕೆಗಳನ್ನು ಪ್ರಾರಂಭಿಸುವ ಮುನ್ನ, ವಿದ್ಯಾರ್ಥಿಗಳು ತಮ್ಮ ಪರಿಸರದಿಂದ ಬೇರೆ ಬೇರೆ ಬಗೆಯ ಎಲೆಗಳನ್ನು ಸಂಗ್ರಹಿಸುವಂತೆ ಶಿಕ್ಷಕರು ಹೇಳಬೇಕು. ಬಿದ್ದ ಎಲೆಗಳನ್ನು ಮಾತ್ರ ಹೆಕ್ಕಿ

ತರುವಂತೆಯೂ, ಗಿಡ/ಮರಗಳಿಂದ ಎಲೆಗಳನ್ನು ಕೀಳಬಾರದು ಎಂದು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಬೇಕು.

2. ನಂತರ, ಎಲೆಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ವಿದ್ಯಾರ್ಥಿಗಳಿಗೆ ಶಿಕ್ಷಕರು ಹೇಳಬೇಕು (ಸ್ವತಃ ಸಂಗ್ರಹಿಸಿದ ಮತ್ತು ಬೇರೆ ವಿದ್ಯಾರ್ಥಿಗಳು ಸಂಗ್ರಹಿಸಿದ ಎಲೆಗಳು). ಇದಾದ ಬಳಿಕ, ಎಲೆಗಳ ಆಕಾರ, ಗಾತ್ರ, ಬಣ್ಣ ಮತ್ತು ರಚನೆಯ ನೆಲೆಯಲ್ಲಿ ವಿದ್ಯಾರ್ಥಿಗಳು ಎಲ್ಲಾ ಎಲೆಗಳ ಬಗ್ಗೆ ಚರ್ಚೆ ನಡೆಸಬೇಕು.

3. 'ಎಲೆಗಳು ಗಿಡಗಳಿಗೆ ಯಾಕೆ ಮುಖ್ಯ?' 'ಗಿಡದಿಂದ ಬಿದ್ದ ಎಲೆಗಳು ಮತ್ತು ಇನ್ನೂ ಗಿಡದಲ್ಲಿರುವ ಎಲೆಗಳ ನಡುವಿನ ವ್ಯತ್ಯಾಸವೇನು?' 'ಗಿಡಗಳಲ್ಲಿ ವಿವಿಧ ಆಕಾರದ ಎಲೆಗಳು ಯಾಕೆ ಇರುತ್ತವೆ?' ಎಂಬಿತ್ಯಾದಿ ಪ್ರಶ್ನೆಗಳನ್ನು ಶಿಕ್ಷಕರು ಕೇಳಬಹುದು.

4. ಇದಾದ ಬಳಿಕ, ಎಲೆಗಳ ಸಹಾಯದಿಂದ ಮಾಡಿರುವ ಚಿತ್ರಕಲೆ/ಕಲಾಕೃತಿಗಳ ಫೋಟೊ ಹಾಗೂ ವಿಡಿಯೊಗಳನ್ನು ಶಿಕ್ಷಕರು ಪ್ರದರ್ಶಿಸಬಹುದು.

5. ಆಮೇಲೆ, ವಿದ್ಯಾರ್ಥಿಗಳನ್ನು ಗುಂಪುಗಳಾಗಿ ವಿಭಾಗಿಸಿ, ಎಲೆಗಳು ಮತ್ತು ಹೂವುಗಳಿಂದ ಬಾಗಿಲುಗಳಿಗೆ ತೋರಣಗಳನ್ನು ಮಾಡಲು ಹೇಳಬಹುದು. ವಿದ್ಯಾರ್ಥಿಗಳು ಬಟ್ಟೆ ಅಥವಾ ಕಾಗದದಿಂದ ಹೂವುಗಳನ್ನು ತಯಾರಿಸಿ ತಮ್ಮ ಮನೆ ಮತ್ತು ತರಗತಿಗಳನ್ನು ಅಲಂಕರಿಸಬಹುದು.

6. ಮುಂದಿನ ಚಟುವಟಿಕೆ "ಎಲೆಗಳ ಅಚ್ಚು ಬಿಡಿಸುವುದು'/ ಎಲೆಗಳ ಮುದ್ರಣ. ಇದರಲ್ಲಿ, ಪ್ರತಿ ಗುಂಪಿನ ಸದಸ್ಯರೂ ವಿಭಿನ್ನವಾದ ಎಲೆಯನ್ನು ತಂದು ನಿಗದಿತವಾದ ಒಂದು ಬಣ್ಣವನ್ನು ಆರಿಸಿಕೊಳ್ಳಬೇಕು. ಇಡೀ ತಂಡ ದೊಡ್ಡ ಕಾಗದದಲ್ಲಿ ಬೃಹತ್ ಆಕಾರದ ಎಲೆಯ ಅಚ್ಚು ಬಿಡಿಸಬೇಕು. ಇದರಿಂದ ವೈವಿಧ್ಯಮಯ ಬಣ್ಣ ಮತ್ತು ಆಕಾರಗಳು, ಆಸಕ್ತಿಕರ ವಿನ್ಯಾಸಗಳು ಸೃಷ್ಟಿಯಾಗುತ್ತವೆ.

7. ಇದಾದ ಬಳಿಕ, 'ಎಲೆಗಳ ಪಾತ್ರ/ಆಕೃತಿ'ಗಳನ್ನು ರಚಿಸಬೇಕು. ಅಂದರೆ, ವಿದ್ಯಾರ್ಥಿಗಳು ಎಲೆಗಳ ಸಹಾಯದಿಂದ ವಿವಿಧ ಪಾತ್ರಗಳು/ ಆಕೃತಿಗಳನ್ನು (ಬೆಕ್ಕು, ಮೀನು, ನಾಯಿ, ಹಕ್ಕಿ, ಮನುಷ್ಯ, ಮನೆ, ದೋಣಿ ಇತ್ಯಾದಿ) ರಚಿಸಬೇಕು.

8. ಕೊನೆಯದಾಗಿ, ಶಿಕ್ಷಕರು "ಪಾಠ 4: ಪತ್ತೇ ಹೀ ಪತ್ತೇ' ಪದ್ಯವನ್ನು ಜೋರಾಗಿ ಓದಬೇಕು. ಹೊಸ ಮತ್ತು ಕಠಿಣ ಪದಗಳನ್ನು ಉಚ್ಚರಿಸಲು ಶಿಕ್ಷಕರು ವಿದ್ಯಾರ್ಥಿಗಳಿಗೆ ನೆರವಾಗಬೇಕು.

9.ಈ ಚಟುವಟಿಕೆಗಳ ವೇಳೆ, ವಿದ್ಯಾರ್ಥಿಗಳ ಪ್ರತಿಕ್ರಿಯೆಗಳನ್ನು ಶಿಕ್ಷಕರು ಗಮನಿಸಿ ದಾಖಲಿಸಬೇಕು.

ಮೌಲ್ಯಮಾಪನ

1-4 ಅಂಶ: 1-3ರ ಒಳಗಿನ ಮಾನದಂಡದ ನೆಲೆಯಲ್ಲಿ ಅಂಕ ನಿಗದಿ ಮಾಡುವುದು

5-8 ಅಂಶಗಳು: ಒಂದು ವಾಕ್ಯದ ಉತ್ತರಗಳನ್ನು ಒದಗಿಸಿ.

1. ಕಲೆಯಲ್ಲಿ ಸಹಕಾರ ಮತ್ತು ಪಾಲ್ಗೊಳ್ಳುವಿಕೆಯ ಅಗತ್ಯವನ್ನು ಮತ್ತು ಪರಸ್ಪರ ಮೆಚ್ಚುಗೆ ವ್ಯಕ್ತಪಡಿಸುವುದನ್ನು ತೋರಿಸುತ್ತದೆ.

2. ಬಣ್ಣಗಳು, ಆಕಾರಳು, ರಚನೆಗಳು, ಶಬ್ದಗಳು ಮತ್ತು ವಿನ್ಯಾಸಗಳ ವರ್ಗೀಕರಣ, ಗುರುತಿಸುವಿಕೆ.

3. ಚಿತ್ರಕಲೆ ಮಾಡಲು ವಿವಿಧ ಬಗೆಯ ವಸ್ತುಗಳನ್ನು ಸಂಗ್ರಹಿಸುವ ಖುಷಿ.

4. ಅವರು ನೋಡಿದ ಸುಂದರ ವಸ್ತುಗಳು ಬಗ್ಗೆ ಮಾತನಾಡುವುದು ಮತ್ತು ಪ್ರಕೃತಿಯ ಸೌಂದರ್ಯವನ್ನು ಆಸ್ವಾದಿಸುವುದು.

5. ಈ ಚಟುವಟಿಕೆಯಲ್ಲಿ ನೀವು ಉತ್ತಮವಾಗಿ ಮಾಡಿದ್ದು ಏನು?

6. ಮುಂದಿನ ಬಾರಿ ನೀವು ಯಾವುದನ್ನು ಉತ್ತಮಪಡಿಸಲು ಬಯಸುತ್ತೀರಿ?

7.ಯಾವ ಮಕ್ಕಳು ಈ ಚಟುವಟಿಕೆಯಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಿದರು?

8.ಯಾವ ಮಕ್ಕಳಿಗೆ ಹೆಚ್ಚು ಮಾರ್ಗದರ್ಶನದ ಅವಶ್ಯಕತೆ ಇದೆ?

***

ಅಡಿಟಿಪ್ಪಣಿಗಳು:

https://www.youtube.com/watch?v=eBEPR7wziDM

https://www.youtube.com/watch?v=7kIYABvcvCo

https://www.youtube.com/watch?v=h8mkkC9fs1k

**ರುಚಿ ಕೊತ್ನಾಳ**, ಉತ್ತರಕಾಶಿಯ ಮಾಟ್ಲೆಯಲ್ಲಿರುವ ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ ಕಲೆ ಮತ್ತು ಕರಕುಶಲ ವಿಷಯವನ್ನು ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ತರಗತಿಗಳಿಗೆ ಪಾಠ ಮಾಡುತ್ತಾರೆ. ಉತ್ತರಾಖಂಡದ ಎಚ್‌ಎನ್‌ಬಿ ಗರ್‌ವಾಲ್

ವಿಶ್ವವಿದ್ಯಾಲಯದಿಂದ ಚಿತ್ರ ಮತ್ತು ಚಿತ್ರಕಲೆಯಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಜೊತೆಗೆ ಕಲೆ ಮತ್ತು ಕರಕುಶಲ ಕಲೆಯೊಂದಿಗೆ ಪ್ರವಾಸ, ನೃತ್ಯ ಮತ್ತು ಸಂಗೀತವೆಂದರೆ ಅವರಿಗೆ ಅಚ್ಚುಮೆಚ್ಚು. ಸಣ್ಣ ಸಣ್ಣ ವಿಷಯಗಳನ್ನೂ ಆನಂದಿಸಬೇಕು ಎಂಬುದು ಅವರ ಜೀವನ ತತ್ವ. ಪ್ರಾಪಂಚಿಕ ಒತ್ತಡಗಳನ್ನು ಕಡಿಮೆ ಮಾಡಿಕೊಂಡು, ಇರುವುದರಲ್ಲೇ ಸಂತೋಷಪಡಬೇಕು ಎನ್ನುತ್ತಾರೆ. ಅವರ ಸಂಪರ್ಕಕ್ಕೆ: ruchi.kotnala@azimpremjifoundation.org